GOVERNMENT OF KARNATAKA
VIJAYANAGAR INSTITUTE OF
MEDICAL SCIENCES, BELLARY.
18 FEB 2014
No.: 7639
Director

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ ಇಲ್ಲಿನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಟ್ಟಡ ಕಾಮಗಾರಿಯ ಬಾಕಿ ಬಿಲ್ಲುಗಳ ಪಾವತಿಗಾಗಿ **ಅನುದಾನ ಬಿಡುಗಡೆ** ಮಾಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಆಕುಕ 189 ಎಂಪಿಎಸ್ 2009, ದಿನಾಂಕ 13.08.2010.
2. ಸರ್ಕಾರದ ಆದೇಶ ಸಂಖ್ಯೆ:ಆಕುಕ 189 ಎಂಪಿಎಸ್ 2009, ದಿನಾಂಕ 15.10.2010.
3. ಸರ್ಕಾರದ ಆದೇಶ ಸಂಖ್ಯೆ:ಆಕುಕ 189 ಎಂಪಿಎಸ್ 2009, ದಿನಾಂಕ 26.11.2010.
4. ಸರ್ಕಾರಧ ಆದೇಶ ಸಂಖ್ಯೆ:ಆಕುಕ 189 ಎಂಪಿಎಸ್ 2009, ದಿನಾಂಕ 28.02.2011.
5. ಸರ್ಕಾರದ ಆದೇಶ ಸಂಖ್ಯೆ:ಆಕುಕ 189 ಎಂಪಿಎಸ್ 2009 (ಭಾಗ), ದಿನಾಂಕ 05.12.2011.
6. ಸರ್ಕಾರದ ಆದೇಶ ಸಂಖ್ಯೆ:ಆಕುಕ 189 ಎಂಪಿಎಸ್ 2009, ದಿನಾಂಕ 28.03.2012 ಹಾಗೂ ತಿದ್ದುಪಡಿ ದಿನಾಂಕ 29.03.2012.
7. ಸರ್ಕಾರದ ಆದೇಶ ಸಂಖ್ಯೆ: ಆಕುಕ 189 ಎಂಪಿಎಸ್ 2009, ದಿನಾಂಕ 28.08.2012
8. ಸರ್ಕಾರದ ಆದೇಶ ಸಂಖ್ಯೆ: ಆಕುಕ 189 ಎಂಪಿಎಸ್ 2009, ದಿನಾಂಕ 10.10.2012
9. ಸರ್ಕಾರದ ಆದೇಶ ಸಂಖ್ಯೆ: ಆಕುಕ 189 ಎಂಪಿಎಸ್ 2009, ದಿನಾಂಕ 18.03.2013
10. ಸರ್ಕಾರದ ಆದೇಶ ಸಂಖ್ಯೆ: ಆಕುಕ 01 ಎಂಎಂಇ 2013, ದಿನಾಂಕ 28.03.2013
11. ಸರ್ಕಾರದ ಆದೇಶ ಸಂಖ್ಯೆ: ಆಕುಕ 01 ಎಂಎಂಇ 2013, ದಿನಾಂಕ 29.06.2013
12. ಸರ್ಕಾರದ ಆದೇಶ ಸಂಖ್ಯೆ: ಆಕುಕ 01 ಎಂಎಂಇ 2013, ದಿನಾಂಕ 16.12.2013
13. ನಿರ್ದೇಶಕರು, ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ ಇವರ ಪತ್ರ ಸಂಖ್ಯೆ:ವಿಮ್ಸ್:ಲೆಕ್ಕಪತ್ರ:39:2013-14, ದಿನಾಂಕ 30.12.2013

**ಪ್ರಸ್ತಾವನೆ:**

ಓದಲಾದ (1) ಮತ್ತು (2) ರ ಸರ್ಕಾರದ ಆದೇಶಗಳಲ್ಲಿ ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ ಇಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಾಮಗಾರಿಯನ್ನು ಪ್ರಾರಂಭಿಸಲು ಕಟ್ಟಡ ಕಾಮಗಾರಿಯ ರೂ.80.00 ಕೋಟಿಗಳಿಗೆ ಸೀಮಿತಗೊಳಿಸಿದ ಅಂದಾಜು ಪಟ್ಟಿಗೆ ಕೆಲವು ಷರತ್ತುಗಳಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಓದಲಾದ (3), (4) ಮತ್ತು (5) ರ ಸರ್ಕಾರದ ಆದೇಶಗಳಲ್ಲಿ ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ ಇಲ್ಲಿನ ಸೂಪರ್ ಸ್ಪೆಷಲಿಟಿ ಆಸ್ಪತ್ರೆಯ ಕಟ್ಟಡ ಕಾಮಗಾರಿಗಾಗಿ ತಲಾ ರೂ.500.00 ಲಕ್ಷಗಳ ಅನುದಾನವನ್ನು, ಓದಲಾದ (6) ರ ಸರ್ಕಾರದ ಆದೇಶ ಹಾಗೂ ತಿದ್ದುಪಡಿ ಆದೇಶದನ್ವಯ ರೂ.175.00 ಲಕ್ಷಗಳನ್ನು, (7) ರ ಸರ್ಕಾರದ ಆದೇಶದಲ್ಲಿ ರೂ.161.00 ಲಕ್ಷಗಳನ್ನು, (8) ರ ಸರ್ಕಾರದ ಆದೇಶದಲ್ಲಿ ರೂ.323.00 ಲಕ್ಷಗಳನ್ನು, (9) ರ ಸರ್ಕಾರದ ಆದೇಶದಲ್ಲಿ ರೂ.436.90 ಲಕ್ಷಗಳನ್ನು, (10) ರ ಸರ್ಕಾರದ ಆದೇಶದಲ್ಲಿ ರೂ.531.00 ಲಕ್ಷಗಳನ್ನು, (11) ರ ಸರ್ಕಾರದ ಆದೇಶದಲ್ಲಿ ರೂ.125.00 ಲಕ್ಷಗಳನ್ನು ಮತ್ತು (12) ರ ಸರ್ಕಾರದ ಆದೇಶದಲ್ಲಿ ರೂ.250.00 ಲಕ್ಷಗಳನ್ನು ಬಿಡುಗಡೆ ಮಾಡಿ ಆದೇಶಿಸಿದೆ.

ಓದಲಾದ (13) ರ ಪತ್ರದಲ್ಲಿ ನಿರ್ದೇಶಕರು, ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ ಇವರು ಬಳ್ಳಾರಿಯ ವಿಮ್ಸ್ ಆಸ್ಪತ್ರೆಯ ಅಧೀನದಲ್ಲಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ 2013-14 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4210-01-110-1-11-132 (ಯೋಜನೆ) ಅಡಿ ರೂ.500.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆಯೆಂದು, ಈ ಅನುದಾನದಲ್ಲಿ ಈಗಾಗಲೇ ರೂ.375.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದ್ದು, ಇನ್ನು ರೂ.125.00 ಲಕ್ಷಗಳು ಮಾತ್ರ ಬಾಕಿ ಉಳಿದಿರುತ್ತದೆಂದು ತಿಳಿಸುತ್ತಾ, ಪ್ರಸ್ತುತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಟ್ಟಡ ಕಾಮಗಾರಿಯ 16 ನೇ ಎಂಆರ್‌ಎ ಬಿಲ್ಲು ಪಾವತಿಗಾಗಿ ರೂ.325.00 ಲಕ್ಷಗಳ ಅವಶ್ಯಕತೆ ಇದ್ದು, ಸದರಿ ಕಾಮಗಾರಿಯು ಅತೀ ವೇಗಗತಿಯಲ್ಲಿ ಪ್ರಗತಿಯಲ್ಲಿರುವುದರಿಂದ ಮಾರ್ಚ್ ಅಂತ್ಯದ ವೇಳೆಗೆ ಬಾಕಿ ಬಿಲ್ಲುಗಳ ಪಾವತಿಗಾಗಿ ಅವಶ್ಯವಿರುವ ರೂ.325.00 ಲಕ್ಷಗಳನ್ನು ಒಳಗೊಂಡಂತೆ ಒಟ್ಟು ರೂ.825.00 ಲಕ್ಷಗಳು ಅನುದಾನದ ಅವಶ್ಯಕತೆ ಇರುವುದಾಗಿ ತಿಳಿಸಿ, ಈ ಅನುದಾನವನ್ನು ಪ್ರಸಕ್ತ ಸಾಲಿನ ಲೆಕ್ಕಶೀರ್ಷಿಕೆ 4210-01-110-1-11-132 (ಯೋಜನೆ) ಅಡಿ ಹೆಚ್ಚುವರಿಯಾಗಿ ಬಿಡುಗಡೆಗೊಳಿಸುವಂತೆ ಸರ್ಕಾರವನ್ನು ಕೋರುತ್ತಾ, ಈ ಹಿಂದೆ ಬಿಡುಗಡೆಗೊಳಿಸಲಾದ ರೂ.250.00 ಲಕ್ಷಗಳ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ ಇಲ್ಲಿನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಟ್ಟಡ ಕಾಮಗಾರಿಯ ಬಾಕಿ ಬಿಲ್ಲುಗಳ ಪಾವತಿಗಾಗಿ ರೂ.125.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 01 ಎಂಎಂಇ 2013, ಬೆಂಗಳೂರು, ದಿನಾಂಕ 10.02.2014**

ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ ಇಲ್ಲಿನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಟ್ಟಡ ಕಾಮಗಾರಿಯ ಬಾಕಿ ಬಿಲ್ಲುಗಳ ಪಾವತಿಗಾಗಿ ರೂ.125.00 ಲಕ್ಷಗಳ (ಒಂದು ನೂರ ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಿದೆ.

ಈ ವೆಚ್ಚವನ್ನು 2013-14 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4210-01-110-1-11-132 (ಯೋಜನೆ) ಅಡಿಯಲ್ಲಿ ಒದಗಿಸಲಾಗಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000 ರ ಪ್ರಕಾರ ನಿರ್ಮಾಣ ಮಾಡತಕ್ಕದ್ದು.

ಕರ್ನಾಟಕ ಆರ್ಥಿಕ ಸಂಹಿತೆ 1958 ರ 161ನೇ ಅನುಚ್ಛೇದದಡಿ ಯಾವ ಉದ್ದೇಶಕ್ಕಾಗಿ ಮೇಲ್ಕಂಡ ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದು. ನಿಗದಿತ ನಮೂನೆಯಲ್ಲಿ ಅನುದಾನದ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ, ಮಹಾಲೇಖಪಾಲರಿಗೆ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು. ಇದೂವರೆಗೆ ಬಿಡುಗಡೆ ಮಾಡಲಾದ ಅನುದಾನದ ಬಳಕೆ ಪ್ರಮಾಣ ಪತ್ರ ಮತ್ತು ಕಾಮಗಾರಿಯ ಪ್ರಗತಿಯ ವರದಿಯನ್ನು ಸಲ್ಲಿಸದೆ ಇದ್ದ ಪಕ್ಷದಲ್ಲಿ ಅನುದಾನದ ಭವಿಷ್ಯ ಬೇಡಿಕೆಯನ್ನು ಪರಿಗಣಿಸಲಾಗುವುದಿಲ್ಲ. ಸದರಿ ಸಂಹಿತೆಯ 342 (ii) (x) ನೇ ಅನುಚ್ಛೇದದಡಿ ಹೊಂದಾಣಿಕೆ (ರೀಕನ್ಸಿಲಿಯೇಷನ್) ಪ್ರಮಾಣ ಪತ್ರವನ್ನು ಮಹಾಲೇಖಪಾಲಕರ ಕಛೇರಿಯಿಂದ ಪಡೆದು ಮೂರು ತಿಂಗಳ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

ತತ್ಸಂಬಂಧಿತ ಅನುದಾನದ ಬಿಲ್ಲುಗಳಿಗೆ ಸರ್ಕಾರದ ಉಪ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ) ಇವರು ಮೇಲು ರುಜು ಮಾಡಲು ಅಧಿಕೃತಗೊಳಿಸಲಾಗಿದೆ.

ಸಂಬಂಧಿಸಿದ ಸಂಸ್ಥೆಯ ನಿರ್ದೇಶಕರು ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಡ್ರಾ ಮಾಡುವ ಬಿಲ್ಲುಗಳಿಗೆ ಸಕ್ಷಮ ಪ್ರಾಧಿಕಾರದ ಮೇಲು ರುಜು ಪಡೆದು ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ಇಲ್ಲಿ ಸಲ್ಲಿಸತಕ್ಕದ್ದು.

ಈ ಕಾಮಗಾರಿಯ ಬಿಲ್ಲುಗಳ ಮೊತ್ತವನ್ನು ಸಂಸ್ಥೆಯ ನಿರ್ದೇಶಕರು ನೇರವಾಗಿ ಸಂಬಂಧಿತ ಗುತ್ತಿಗೆದಾರರಿಗೆ ಕ್ರಾಸ್ಡ್ ಚೆಕ್ ಮುಖಾಂತರ ಪಾವತಿಸತಕ್ಕದ್ದು. ಶಾಸನಬದ್ಧ ಕಳಿಕೆಗಳಾದ ಕೆ.ಎಸ್.ಟಿ., ಸಿ.ಎಸ್.ಟಿ., ಹಾಗೂ ಇತ್ಯಾದಿ ಕಳಿಕೆಗಳನ್ನು ಸಂಬಂಧಿತ ನಿರ್ದೇಶಕರು ಸಂಬಂಧಿತ ಕಾರ್ಯ ನಿರ್ವಾಹಕ ಅಭಿಯಂತರರ ಮೂಲಕ ಪಾವತಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 118 ವೆಚ್ಚ-5/2014, ದಿನಾಂಕ 07.02.2014 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಆರ್.ನಾಗಭೂಷಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಇವರಿಗೆ:

1. ಮಹಾಲೇಖಪಾಲರು (ಲೆಕ್ಕಪತ್ರ) / (ಲೆಕ್ಕಪರಿಶೋಧನೆ - 1 ಮತ್ತು 2), ಕರ್ನಾಟಕ, ಬೆಂಗಳೂರು-560001.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು-560009.
3. ನಿರ್ದೇಶಕರು, ಖಜಾನೆ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001.
4. ನಿರ್ದೇಶಕರು, ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ-583104.
5. ಆಂತರಿಕ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ.
6. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
7. ಖಜಾನಾ ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ - 4 ಮತ್ತು 5), ವಿಧಾನ ಸೌಧ, ಬೆಂಗಳೂರು.
9. ಯೋಜನಾಧಿಕಾರಿಗಳು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು-09.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ.